ಸಾರ್ವಜನಿಕ ಆರೋಗ್ಯ ಸೇವೆಗಳ ಮೂಲ ಸೌಕರ್ಯಗಳು

456(923); ಶ್ರೀ ಬಾಲಕೃಷ್ಣ ಸಿ ಎನ್. (ಶ್ರವಣಬೆಳಗೊಳ)

ಅ) ರಾಜ್ಯದಲ್ಲಿ ಸಾರ್ವಜನಿಕ ಆರೋಗ್ಯ ಸೇವೆಗಳ ಮೂಲಸೌಕರ್ಯಗಳ ಸ್ಥಿತಿಗತಿ ದಾಗೂ ಈ ವ್ಯವಸ್ಥೆಯಡಿಯಲ್ಲಿರುವ ವಿವಿಧ ಸ ಸ್ಥೆಗಳ ವಿವರಗಳೇನು;

ಆ) ಪ್ರಾಥಮಿಕ ಆರೋಗ್ಯ ಕೇಂದ್ರಗಳ ತಾಲ್ಲೂಕುವಾರು ಸಂಖ್ಯಾ ವಿವರಗಳೇನು; ಬೇಡಿಕೆಗೆ ಅನುಗುಣವಾಗಿ ಸದರಿ ಕೇಂದ್ರಗಳನ್ನು ಪ್ರಾರಂಭಿಸುವ ಕುರಿತು ಜರುಗಿದ ಕ್ರಮಗಳೇನು;

ಇ) ಸಾರ್ವಜನಿಕ ಆರೋಗ್ಯ ಸೇವೆಗಳ ಕುರಿತಾದ ಮೂ ಭೂತ ಸೌಕರ್ಯಗಳನ್ನು ಒದಗಿಸುವುದು ಅತ್ಯಾವಶ್ಯಕವಾಗಿದ್ದು, ಅವುಗಳ ಕೊರತೆ ನೀಗಿಸಲು ಸರ್ಕಾರದ ಕ್ರಿಯಾ ಯೋಜನೆಗಳೇನು;

ಈ) ಕಳೆದ ಎರಡು ವರ್ಷಗಳಲ್ಲಿ ಕೇಂದ್ರ ಸರ್ಕಾರದಿಂದ ಮಂಜೂರಾದ ಅನುದಾನವೆಷ್ಟು? (ವಿವರ ನೀಡುವುದು)

ಶ್ರೀ ಯು.ಟಿ ಖಾದರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ರಾಜ್ಯದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲಿ ಎ.ಎನ್.ಎಂ. ಉಪಕೇಂದ್ರಗಳು, ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಸಮುದಾಯ ಆರೋಗ್ಯ ಕೇಂದ್ರಗಳು, ತಾಲ್ಲೂಕು ಸಾರ್ವಜನಿಕ ಆಸ್ಪತ್ರೆಗಳು, ಜಿಲ್ಲಾ ಆಸ್ಪತ್ರೆಗಳು ಮತ್ತು ಇತರೆ ಆಸ್ಪತ್ರೆಗಳು ಕಾರ್ಯನಿರ್ವಹಿಸುತ್ತಿವೆ. ಇವುಗಳನ್ನು ಹೊರತುಪಡಿಸಿ ಇ.ಎಸ್.ಐ. ಆಸ್ಪತ್ರೆಗಳು, ನಗರ ಸಭೆ ವ್ಯಾಪ್ತಿಯ ಆಸ್ಪತ್ರೆಗಳು ಮತ್ತು ವೈ ೀಯ ಶಿಕ್ಷಣ ಇಲಾಖೆಗೆ ಒಳಪಡುವ ಆಸ್ಪತ್ರೆಗಳು ಸಾರ್ವಜನಿಕ ಆ ೋಗ್ಯ ಸೇವೆಯನ್ನು ಒದಗಿಸುತ್ತಿದೆ.

ರಾಜ್ಯದಲ್ಲಿ ಒಟ್ಟು 2353 ಪ್ರಾಥಮಿಕ ಆರೋಗ್ಯ ಕೇಂದ್ರಗಳು, 188 ಸಮುದಾಯ ಆರೋಗ್ಯ ಕೆಂದ್ರಗಳು, 146 ತಾಲ್ಲೂಕು ಆರೋಗ್ಯ ಕೇಂದ್ರಗಳು, 20 ಜಿಲ್ಲಾ ಆಸ್ಪತ್ರೆಗಳು ಕಾರ್ಯ ನಿರ್ವಹಿಸುತ್ತಿವೆ

ಆ) ಪ್ರಾಥಮಿಕ ಆರೋಗ್ಯ ಕೇಂದ್ರಗಳ ತಾಲ್ಲೂಕುವಾರು ಸಂಖ್ಯಾ ವಿವರಗಳನ್ನು ಅನುಬಂಧ–2ರಲ್ಲಿ ನೀಡಲಾಗಿದೆ.

ಸಮತಟ್ಟು ಪ್ರದೇಶಗಳಲ್ಲಿ 30,000 ಜನಸಂಖ್ಯೆ ಹಾಗೂ ಗುಡ್ಡಗಾಡು ಹಾಗೂ ಗಿರಿಜನ ಪ್ರದೇಶಗಳ್ಳಿ 20,000 ಜನಸಂಖ್ಯೆಗೆ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮಂಜೂರು ಮಾಡಲು ಅನುಸೂಚಿಗಳಲ್ಲಿ ಅವಕಾಶವಿದೆ. ಮಾರ್ಗಸೂಚಿಗಳ ಪ್ರಕಾರ, 1,259 ಪ್ರಾಥಮಿಕ ಆರೋಗ್ಯ ಕೇಂದ್ರಗಳ ಅವಶ್ಯಕತೆ ಇದ್ದು, ಪ್ರಸ್ತುತ 2353 ಪ್ರಾಧಮಿಕ ಆರೋಗ್ಯ ಕೇಂದ್ರಗಳು ಆಸ್ತಿತ್ವದಲ್ಲಿದ್ದು 1,094 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಹೆಚ್ಚುವರಿಯಾಗಿವೆ. ಸರ್ಕಾರದ ಆದೇಶ ಸಂಖ್ಯೆ:ಆಕುಕ/350/ಸಿಜಿಎಂ/2010, ದಿನಾಂಕ 11–01–2011ರಲ್ಲಿ ರಾಜ್ಯದಲ್ಲಿ ಹೊಸ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸುವುದು ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಸಮುದಾಯ ಆರೋಗ್ಯ ಕೇಂದ್ರಗಳು ಮತ್ತು ಸಾರ್ವಜನಿಕ ಆಸ್ಪತ್ರೆ ಇತ್ಯಾದಿಗಳ ಮೇಲ್ದರ್ಜೆಗೇರಿಸುವಿಕೆಯನ್ನು ಒಂದು ನೀತಿ ನಿರ್ಣಯವಾಗಿ ತಕ್ಷಣದಿಂದ ಜಾರಿಗೆ ಬರುವಂತೆ 3 ವರ್ಷಗಳ ಅವಧಿಗೆ ಸರ್ಕಾರವು ತಡೆಹಿಡಿದಿದೆ.

ಇ) ಮೂಲಭೂತ ಸೌಕರ್ಯ ಇಲ್ಲದ ಕಡೆ ಇಲಾಖೆಯಲ್ಲಿ ಅನುದಾನದ ಲಭ್ಯತೆಯನ್ನಾಧರಿಸಿ ಕಟ್ಟಡಗಳನ್ನು ನಿರ್ಮಿಸಲು ಕ್ರಮ ತೆಗೆದು ಕೊಳ್ಳಲಾಗುವುದು.

ಈ) 2012–13ನೇ ಸಾಲಿನಲ್ಲಿ ಒಟ್ಟು ₹ 62951.92 ಲಕ್ಷಗಳಲ್ಲಿ ಅನುದಾನವನ್ನು ವಿವಿಧ ಲೆಕ್ಕ ಶೀರ್ಷಿಕೆಯಲ್ಲಿ ನೀಡಲಾಗಿದೆ.

2013–14ನೇ ಸಾಲಿನಲ್ಲಿ ₹ 79958.25 ಲಕ್ಷಗಳಲ್ಲಿ ಅನುದಾನವನ್ನು ವಿವಿಧ ಲೆಕ್ಕ ಶೀರ್ಷಿಕೆಯಲ್ಲಿ ನೀಡಲಾಗಿದೆ ಇವುಗಳ ವಿವರಗಳನ್ನು ಅನುಬಂಧ–1ರಲ್ಲಿ ನೀಡಲಾಗಿದೆ.

ಅನುಬಂಧ–1

ಕಳೆದ ಎರಡು ವರ್ಷಗಳಲ್ಲಿ ಕೇಂದ್ರ ಸರ್ಕಾರದಿಂದ ಮಂಜೂರಾದ ಅನುದಾನದ ವಿವರಗಳು (₹ ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ಯೋಜನೆಗಳ ಹೆಸರು ಮತ್ತು ಲೆಕ್ಕಶೀರ್ಷಿಕೆ	2012–13ನೇ ಸಾಲಿನ ಅನುದಾನ (ಯೋಜನೆ)	2013–14ನೇ ಸಾಲಿನ ಅನುದಾನ (ಯೋಜನೆ)
1	2	3	4
ಕೇಂದ್ರ ಪುರಸ್ಕೃತ ಯೋಜನೆಗಳು			
I ಆರೋಗ್ಯ ಕಾರ್ಯಕ್ರಮಗಳು			
1	ರಾಷ್ಟ್ರೀಯ ಮಲೇರಿಯಾ ನಿರೋಧ ಕಾರ್ಯಕ್ರಮ (ನಗರ) 2210–06–101–1–03	100.00	100.00
2	ರಾಷ್ಟ್ರೀಯ ಆಯೋಡಿನ್ ಕೊರತೆ ನಿಯಂತ್ರಣ ಕಾರ್ಯ ಕ್ರಮ 2210–06–101–7–10	36.02	36.13
3	ಸಮಗ್ರ ರೋಗಗಳ ಪರಿವೀಕ್ಷಣಾ ಕಾರ್ಯಕ್ರಮ 2210–06–101–7–14	62.46	65.00
4	ಗಿನಿಯ ಜಂತು ನಿರ್ಮೂಲನ ಕಾರ್ಯಕ್ರಮ 2210–06–101–7–06	6 00	6.00
5	ಕರ್ನಾಟಕ ರಾಜ್ಯ ಅಂದತ್ವ ನಿಯಂತ್ರಣ ಸಂಘ 2210–06–101–8–04	2500.00	--

6	ಮೈಸೂರು ಮತ್ತು ಬೆಳಗಾವಿಯಲ್ಲಿ ಆಹಾರ ಪರೀಕ್ಷಾ ಪ್ರಯೋಗಾಲಯಗಳ ಮೇಲ್ದರ್ಜೆಗೇರಿಸುವಿಕೆ 2210-06-107-0-08	–	300.00
	ಒಟ್ಟು	**2704.48**	**507.13**
II	**ಕುಟುಂಬ ಕಲ್ಯಾಣ ಕಾರ್ಯಕ್ರಮ**		
1	ರಾಜ್ಯ ಕುಟುಂಬ ಕಲ್ಯಾಣ ವಿಭಾಗ 2211-00-001-0-01	599 89	777 94
2	ನಗರ ಕುಟುಂಬ ಕಲ್ಯಾಣ ವಿಭಾಗ 2211-00-001-0-03	10 00	20 00
3	ಪ್ರಾದೇಶಿಕ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ತರಬೇತಿ ಕೇಂದ್ರಗಳು 2211-00-003-0-01	243 25	293 46
4	ಸಹಾಯಕ ನರ್ಸುಗಳ ಸೂಲಗಿತ್ತಿಯರ, ದಾದಿಯರ ಮತ್ತು ಮಹಿಳಾ ಆರೋಗ್ಯ ಸಂದರ್ಶಕರ ತರಬೇತಿ 2211-00-003-0-02	1214 02	1334 01
5	ವಿವಿಧೋದ್ದೇಶ ಕಾರ್ಯಕರ್ತರ (ಪುರುಷ) ತರಬೇತಿ 2211-00-003-0-04	250 82	246 01
6	ರಾಜ್ಯ ಸರ್ಕಾರ ನಡೆಸುವ ನಗರ ಕುಟುಂಬ ಕಲ್ಯಾಣ ಕೇಂದ್ರಗಳು 2211-00-102-0-01	1106 58	1072 94
7	ಸ್ಥಳೀಯ ಸಂಸ್ಥೆಗಳು ಮತ್ತು ಸ್ವಯಂಸೇವಾ ಸಂಘಗಳಿಂದ ನಡೆಸಲ್ಪಡುತ್ತಿರುವ ನಗರ ಕುಟುಂಬ ಕಲ್ಯಾಣ ಕೇಂದ್ರಗಳು 2211-00-102-0-02	800 00	1000.00

8	ಜಿಲ್ಲಾ ಪಂಚಾಯತ್‌ಗಳಿಗೆ ಸಹಾಯಾನುದಾನ 2211-00-196	33093 88	42194 76
9	ಕೇಂದ್ರ ಸರ್ಕಾರ ಒದಗಿಸಿದ ಗರ್ಭನಿರೋಧಕ/ಸಾಮಗ್ರಿಗಳ ಬೆಲೆ 2211-00-200-0-04	400 00	400 00
	ಒಟ್ಟು	**37718 44**	**47339.12**
III	ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ	22469 00	22499.00
IV	ರಾಷ್ಟ್ರೀಯ ನಗರ ಆರೋಗ್ಯ ಅಭಿಯಾನ	–	9520 00
V	ಔಷಧ ನಿಯಂತ್ರಣ	60.00	93 00
	ಒಟ್ಟು (I-V)	**62951.92**	**7995 25**

ಅನುಬಂಧ-2

ಕ್ರ.ಸಂ.	ಜಿಲ್ಲೆ	ಪ್ರಾಥಮಿಕ ಆರೋಗ್ಯ ಕೇಂದ್ರಗಳು
1	ಬೆಂಗಳೂರು (ನಗರ)	107
2	ಬೆಂಗಳೂರು (ಗ್ರಾ)	47
3	ರಾಮನಗರ	65
4	ಚಿತ್ರದುರ್ಗ	84
5	ದಾವಣಗೆರೆ	105
6	ಕೋಲಾರ	63
7	ಚಿಕ್ಕಬಳ್ಳಾಪುರ	57
8	ಶಿವಮೊಗ್ಗ	103
9	ತುಮಕೂರು	149
	ಒಟ್ಟು	**780**
10	ಬಾಗಲಕೋಟೆ	50
11	ಬೆಳಗಾವಿ	150
12	ಬಿಜಾಪುರ	67
13	ಧಾರವಾಡ	34

14	ಗದಗ	39
15	ಹಾವೇರಿ	68
16	ಉತ್ತರಕನ್ನಡ	83
	ಒಟ್ಟು	**491**
17	ಬಳ್ಳಾರಿ	80
18	ಬೀದರ್	55
19	ಗುಲಬರ್ಗಾ	90
20	ಯಾದಗಿರಿ	49
21	ಕೊಪ್ಪಳ	50
22	ರಾಯಚೂರು	56
	ಒಟ್ಟು	**380**
23	ಚಾಮರಾಜನಗರ	60
24	ಚಿಕ್ಕಮಗಳೂರು	92
25	ದಕ್ಷಿಣಕನ್ನಡ	69
26	ಹಾಸನ	134
27	ಕೊಡಗು	30
28	ಮಂಡ್ಯ	114
29	ಮೈಸೂರು	132
30	ಉಡುಪಿ	71
	ಒಟ್ಟು	**702**
	ಒಟ್ಟು	**2353**